ಈ) ಭೂಸ್ವಾಧೀನದಲ್ಲಿನ ಕೆಲವು ಪ್ರಕರಣಗಳು ಅವಾರ್ಡ್ ಹಂತದಲ್ಲಿರುವುದರಿಂದ ಅವುಗಳ ಅವಾರ್ಡ್ ಅನುಮೋದನೆ ಬಳಿಕ ಹಂತ ಹಂತವಾಗಿ ಪಾವತಿಸಲು ಕ್ರಮ ಜರುಗಿಸಲಾಗುವುದು.

ಜುಟ್ಟನಹಳ್ಳಿ ಏತ ನೀರಾವರಿ ಯೋಜನೆ

2036(1833); ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ)

ಅ) ಶ್ರವಣಬೆಳಗೊಳ ಮತ್ತು ಸಂತೇಬಾಚಹಳ್ಳಿ ಹೋಬಳಿಗಳ ಕೆರೆಗಳಿಗೆ ನೀರು ತುಂಬಿಸುವ ಜುಟ್ಟನಹಳ್ಳಿ ಏತ ನೀರಾವರಿ ಯೋಜನೆಯ ರೂಪುರೇಷೆಗಳನ್ನು ಅಂತಿಮಗೊಳಿಸಲಾಗಿದೆಯೇ?

ಆ) ಈ ಯೋಜನೆಗೆ ಸರ್ಕಾರ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದೆಯೇ?

ಇ) ಈ ಯೋಜನೆಯ ಒಟ್ಟು ಅಂದಾಜು ಎಷ್ಟು? ಸರ್ಕಾರ ಈ ಯೋಜನೆಯ ಕಾರ್ಯಾರಂಭಕ್ಕೆ ಬಿಡುಗಡೆ ಮಾಡಿರುವ ಹಣ (ಟೋಕನ್ ಗ್ರ್ಯಾಂಟ್) ಎಷ್ಟು?

ಈ) ಈ ಯೋಜನೆಯ ಪಿಕ್‌ಅಪ್ ನಾಲೆಯನ್ನು ಚನ್ನರಾಯಪಟ್ಟಣ ತಾಲ್ಲೂಕು ಬೆಟ್ಟದಹಳ್ಳಿಯಿಂದ ಸಂತೇಬಾಚಹಳ್ಳಿಯ ಒಡವಿನ ಹಳ್ಳಕ್ಕೆ ಹರಿಸಿದಲ್ಲಿ, ಅಲ್ಲಿಂದ ಸಂತೇಬಾಚಹಳ್ಳಿ ಚಿಕ್ಕೆರೆ, ದ್ಯಾವನಕೆರೆ ಮುಲಕ ಹುಬ್ಬನಹಳ್ಳಿ ಕೆರೆ, ಲೋಕನಹಳ್ಳಿ ಕೆರೆ, ಅಫಲಯ ಕೆರೆ, ನಾಗರಘಟ್ಟ ಕೆರೆಗಳಿಗೆ ನೀರು ಸಹಜವಾಗಿ ಕೋಡಿಹಳ್ಳದ ಮೂಲಕ ಹರಿಯುವುದಾಗಿದ್ದು, ಇದನ್ನು ಪರಿಶೀಲಿಸಿ ಈ ರೀತಿ ಯೋಜನೆ ರೂಪಿಸಲಾಗುವುದೇ?

ಉ) ಈ ಯೋಜನೆಯ ಕಾಮಗಾರಿಗಳನ್ನು ಯಾವಾಗ ಕಾರ್ಯಾರಂಭಗೊಳಿಸಲಾಗುವುದು?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು)

ಅ) ಜನ–ಜಾನುವಾರುಗಳಿಗೆ ಕುಡಿಯುವ ನೀರಿಗೆ ಅನುವಾಗಲು ಚನ್ನರಾಯಪಟ್ಟಣ ತಾಲ್ಲೂಕಿನ ಹಿರಿಸಾವೆ, ಶ್ರವಣಬೆಳಗೊಳ ಹೋಬಳಿಯ 16 ಕೆರೆಗಳನ್ನು ಹಾಗೂ ಕೆ.ಆರ್.ಪೇಟೆ ತಾಲ್ಲೂಕಿನ ಸಂತೇಬಾಚಹಳ್ಳಿ ಹೋಬಳಿಯ 8 ಕೆರೆಗಳನ್ನು ಲಿಫ್ಟ್ ಮುಖೇನ ತುಂಬಿಸುವ ಯೋಜನಾ ವರದಿಯನ್ನು ಕಾವೇರಿ ನೀರಾವರಿ ನಿಗಮದಲ್ಲಿ ತಯಾರಿಸಲಾಗಿರುತ್ತದೆ. ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿಯು ಯೋಜನಾ ವರದಿಯಲ್ಲಿ ಕೆಲ ಮಾರ್ಪಾಡುಗಳನ್ನು ಸೂಚಿಸಿದ್ದು ಅದರಂತೆ ಮಾರ್ಪಡಿತ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದ್ದು, ರೂಪುರೇಷೆಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಆ) ಸದರಿ ಯೋಜನೆಯ ಮಾರ್ಪಡಿತ ಯೋಜನಾ ವರದಿಯನ್ನು ಕಾವೇರಿ ನೀರಾವರಿ ನಿಗಮದ ಮಂಡಳಿಯ ಶಿಫಾರಸ್ಸಿನನ್ವಯ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿಯ ಮುಂದೆ ಪರಿಶೀಲನೆಗೆ ಮಂಡಿಸಲಾದ ಯೋಜನಾ ವರದಿಯ ಮೊತ್ತ ₹ 53.50 ಕೋಟಿಗಳಾಗಿರುತ್ತದೆ.

ಸದರಿ ಯೋಜನೆಗೆ 2013–14 ನೇ ಸಾಲಿನ ವಾರ್ಷಿಕ ಕಾರ್ಯಕ್ರಮ ಪಟ್ಟಿಯಲ್ಲಿ ₹ 15.00 ಕೋಟಿ ಅನುದಾನ ನಿಗದಿ ಪಡಿಸಲಾಗಿರುತ್ತದೆ.

ಈ) ದಿನಾಂಕ:01–02–2014 ರಂದು ಜರುಗಿದ ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿಯ ಸಭೆಯಲ್ಲಿ ಮಂಡಿಸಿದ ಯೋಜನಾ ವರದಿಯಲ್ಲಿ ಸಂತೇಬಾಚಹಳ್ಳಿ ಹೋಬಳಿಯ ಕೆರೆಗಳಿಗೆ ವರ್ಷದಲ್ಲಿ 34 ದಿವಸಗಳ ಅವಧಿಯಲ್ಲಿ ನೀರನ್ನು ಎತ್ತಿ ಕೆರೆಗಳಿಗೆ ನೀರು ತುಂಬಿಸಲು ಪ್ರಸ್ತಾಪಿಸಿದ್ದು, ಪ್ರಸ್ತಾವನೆಯನ್ನು ತಾಂತ್ರಿಕವಾಗಿ ಕಾವೇರಿ ನೀರಾವರಿ ನಿಗಮದಲ್ಲಿ ಪರಿಶೀಲಿಸಲಾಗುತ್ತಿದೆ.

ಉ) ಮಾರ್ಪಡಿತ ಯೋಜನಾ ವರದಿಯನ್ನು ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಮರು ಪರೀಶಿಲನೆ ನಂತರ ನಿಗಮದ ಮಂಡಳಿಯ ಶಿಫಾರಸ್ಸನ್ನು ಅನುಸರಿಸಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಸಕ್ಕರೆ ಕಾರ್ಖಾನೆಯಿಂದ ಪರಿಸರ ಮಾಲಿನ್ಯ

2037(2466); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ),

1) ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಮಾಕವಳ್ಳಿ ಗ್ರಾಮದಲ್ಲಿ ಕೋರಮಂಡಲ್ ಸಕ್ಕರೆ ಕಾರ್ಖಾನೆ ಆರಂಭಿಸಿರುವ ಕೋ–ಜೆನ್ ವಿದ್ಯುತ್ ಉತ್ಪಾದನಾ ಘಟಕ ಮತ್ತು ಮಧ್ಯಸಾರ ಘಟಕದ ತ್ಯಾಜ್ಯ ಮತ್ತು ಕಲುಷಿತ ನೀರು ಹೇಮಾವತಿ ನದಿಯನ್ನು ಸೇರಿ, ನದಿ ನೀರನ್ನು ಕಲುಷಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ರೈತ ಸಂಘದವರು ಮತ್ತು ಬಾಧಿತ ಗ್ರಾಮಗಳ ಜನತೆ ಪತ್ರಿಭಟನೆ ನಡೆಸಿ ಮನವಿ ಸಲ್ಲಿಸಿರುವುದು ಹಾಗೂ ಚೆನ್ನೈನ ಹಸಿರು ಪೀಠದ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಬಂದಿದ್ದಲ್ಲಿ, ಪರಿಸರ ಮಂಡಳಿ ಹಾಗೂ ಸರ್ಕಾರ ಕೈಗೊಂಡಿರುವ ಕ್ರಮವೇನು; ಚೆನ್ನೈ ಹಸಿರು ಪೀಠದ ನ್ಯಾಯಾಲಯದ ಮುಂದಿರುವ ಅರ್ಜಿಯನ್ನು ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಬಿ. ರಮಾನಾಥರೈ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

1) ಇಲ್ಲ.

2) ಹೌದು.